ಸಡಿಲವಾದಂತೆನಿಸಿತು. ಒಂದೆರಡು ರೌಂಡಿನ ಡ್ಯಾನ್ಸ್ ಮುಗಿಸಿ ಬಂದು ಮತ್ತೆ ತನ್ನ ಕುರ್ಚಿಯಲ್ಲಿ ಕುಳಿತ. ಎಂಟು ಜನರ ಟೇಬಲಿನಲ್ಲಿ ಈಗ ಕೂತಿದ್ದವರು ವಿಶ್ವ, ವಯಸ್ಸಾದ ಆಂಡಿ ಮತ್ತು ಲಿಂಡ ಮೂವರು ಮಾತ್ರವೇ.

ಆಗಲೇ ನರ್ಸ್ ಎಮಿಲಿ ನರ್ತಿಸುತ್ತ ಬಂದಳು. ಪುಟ್ಟ ದೇಹದಲ್ಲಿ ನೆಟ್ಟಗೆ ನಿಂತಿದ್ದ ಅವಳ ಮೊಲೆಗಳು ಉದ್ದ ಸೀಳಿದ್ದ ಅವಳ ಕಪ್ಪು ದಿರಸಲ್ಲಿ ಅತ್ಯಂತ ಆಕರ್ಷಕವಾಗಿ ಕಾಣುತ್ತಿದ್ದವು. ಚಡ್ಡಿ ಕಾಣುತ್ತಿದ್ದ ಡ್ರೆಸ್. ಉದ್ದನ್ನ ಎಳೆಯ ಬಿಳಿಯ ಕಾಲುಗಳು. ಕುಡಿದು ಅಮಲಿನಲ್ಲಿದ್ದ ಅವಳ ಕಣ್ಣುಗಳು ಎಲ್ಲವೂ ಮಾದಕವಾಗಿದ್ದವು. ಅವಳ ದಿರಸಿನಲ್ಲಿದ್ದ ಚುಂಗನ್ನು ಎಲ್ಲರ ಮುಖಕ್ಕೆ ತಗುಲಿಸಿ ಕಚಗುಳಿಯಿಟ್ಟು ಚುಡಾಯಿಸುತ್ತಿದ್ದಳು. ಅವಳು ತನ್ನ ಹತ್ತಿರಕ್ಕೆ ಬಂದಾಗ "ಓಹೋ..." ಎಂದು ನಗುತ್ತ ವಿಶ್ವ ಅವಳನ್ನು ಸಾಗಹಾಕಲು ನೋಡಿದ.

ಅವಳಿಗಿನ್ನೂ ಖುಷಿಯೆನಿಸಿ ಇವನೆಡೆಗೆ ನುಗ್ಗಿದಳು. ಹಾಕಿದ್ದ ಹೈ ಹೀಲ್ಸ್, ಕುಡಿತದ ಅಮಲು ಎಲ್ಲ ಸೇರಿ ಅವಳು ಆಯ ತಪ್ಪಿ ಇವನ ಮಡಿಲಲ್ಲಿ ಬಿದ್ದುಬಿಟ್ಟಳು. ಅದೇ ತಪ್ಪಾಗಿದ್ದು. ತನ್ನ ಮಡಿಲಲ್ಲಿ ಇಟ್ಟುಕೊಂಡಿದ್ದ ವಿಶ್ವನ ಒಂದು ಅಗಲ ಕೈಯಲ್ಲಿ ಎಮಿಲಿಯ ದುಂಡಗಿನ ಒಂದು ಅಂಡು ಕುಳಿತುಬಿಟ್ಟಿತು!

ಮೃದುವಾದ ಮಾಂಸದ ಸ್ಪರ್ಶವಾದ ಕೂಡಲೇ ವಿಶ್ವನ ಕೈ ಅವನಿಗರಿವಿಲ್ಲದಂತೆಯೇ ಅದನ್ನು ಹಿಚುಕಿಬಿಟ್ಟಿತ್ತು. ನಗುತ್ತಿದ್ದ ಎಮಿಲಿಯ ಮುಖ ತಟ್ಟನೆ ಕಂದಿಹೋಯಿತು. ಅವಳು ವಿಶ್ವನನ್ನು ದುರದುರನೆ ನೋಡಿ ಧಡಕ್ಕನೆ ಎದ್ದು ಹೋಗಿ ಬಿಟ್ಟಿದ್ದಳು. ವಿಶ್ವ ಕಾಲು ಸುಟ್ಟ ಬೆಕ್ಕಾಗಿದ್ದ. ಅಲ್ಲಿ ಕುಳಿತಿರಲಾಗದೆ, ಎಮಿಲಿಯ ಮುಖವನ್ನು ನೋಡಲಾಗದೆ ಒದ್ದಾಡಿಬಿಟ್ಟ. ಟೇಬಲಿನಲ್ಲಿದ್ದ ಇನ್ನಿಬ್ಬರ ಕ್ಷಮೆ ಕೋರಿ, ತನಗೊಂದು ಅರ್ಜೆಂಟ್ ಕಾಲ್ ಇದೆ ಎಂದು ಹೇಳಿ ಎದ್ದು ಬಂದು ಬಿಟ್ಟಿದ್ದ. ಮನೆ ಸೇರುವವರೆಗೆ ಅವನ ಎದೆ ನಗಾರಿಯಂತೆ ಹೊಡೆದುಕೊಳ್ಳುತ್ತಿತ್ತು. ತಾನೇಕೆ ಹಾಗೆ ಮಾಡಿದೆ? ಅವನಿಗೆ ತನ್ನ 'ಕೈ' ದೊಡ್ಡ ಅಪರಾಧಿಯಂತೆ ಕಾಣತೊಡಗಿತ್ತು. ಅವಳು ಕುಡಿದಿದ್ದಳು. ಆಯತಪ್ಪಿ ಬಿದ್ದದ್ದು ಅವಳ ತಪ್ಪಲ್ಲ. ಕುಡಿದು ಮಾಡಿದರೂ ಅದು ಅಪರಾಧವೆ. ಅಂತದ್ದರಲ್ಲಿ ಕುಡಿಯದಿದ್ದರೂ ತಪ್ಪು ಮಾಡಿದ್ದು ತಾನೇ ಅಲ್ಲವೇ? ವಿಶ್ವ ಅಪರಾಧಿ ಪ್ರಜ್ಞೆಯಿಂದ ಕುಬ್ಜನಾಗಿಹೋಗಿದ್ದ.

ರಾಮಚಂದ್ರನ್ ಉಪಯೋಗಿಸಿದ್ದು ಒಂದೇ ಒಂದು ಬೆರಳು. ಅಷ್ಟಕ್ಕೇ ದೇಶಬಿಡಬೇಕಾಯ್ತು. ತಾನು ಐದೂ ಬೆರಳುಗಳನ್ನು ಉಪಯೋಗಿಸಿಬಿಟ್ಟೆನಲ್ಲ... ಅಂತ ನೆನಪಾಗುತ್ತಲೇ ವಿಶ್ವನ ಕಣ್ಣುಗಳು ತನ್ನ ಕೋಣೆಯಲ್ಲಿದ್ದ ಸೂಟ್‌ಕೇಸ್‌ಗಳನ್ನು ತಡವಿ ಹಿಂತಿರುಗಿದವು.

ಎಮಿಲಿಗೆ ಫೋನ್ ಮಾಡಿ ಕಾಲಿಗೆ ಬೀಳೋಣ ಎಂದರೆ ಅವಳ ನಂಬರ್ ವಿಶ್ವನ ಹತ್ತಿರ ಇರಲಿಲ್ಲ. ಜೂನಿಯರ್ ಹುದ್ದೆಯಲ್ಲಿದ್ದಾಗಲೇ ಹೀಗಾಗಬೇಕೆ?

ರಾಜೀನಾಮೆ ಕೊಟ್ಟು ಭಾರತಕ್ಕೆ ವಾಪಸ್ ಹೋದರೆ ಹೆಂಡತಿಗೆ ಏನು ಹೇಳುವುದು? ಸಸ್ಪೆಂಡ್ ಆಗಿಯೂ ಇಲ್ಲೇ ಇದ್ದರೆ ವಿಚಾರಣೆ ಯಾವುದರ ಬಗ್ಗೆ ನಡೆಯುತ್ತಿದೆ ಅಂತ ಹೇಳುವುದು? ಗಫೂರ್ ತನ್ನ ಹೆಂಡತಿಗೆ ಹೇಳಿದರೆ ಅವಳು ನನ್ನ ಹೆಂಡತಿಗೆ ಹೇಳಿಯೇ ಹೇಳುತ್ತಾಳೆ. ವಿಚಾರಣೆ ಅಂತೆಲ್ಲ ಹೋಗಲು ಬಿಡಲೇಬಾರದು.

ಬಹಳಷ್ಟು ಯೋಚಿಸಿದ ನಂತರ ಭಾನುವಾರದ ಕೊನೆಗೆ ವಿಶ್ವ ಒಂದು ನಿರ್ಧಾರಕ್ಕೆ ಬಂದ.

★★★

ಸೋಮವಾರ ಡಿಪಾರ್ಟ್‌ಮೆಂಟಿಗೆ ಎಲ್ಲರಿಗಿಂತ ಮೊದಲೇ ಹೋದ. ನಿನ್ನೆ ಭಾನುವಾರವಾದ್ದರಿಂದ ಅವಳು ದೂರು ಕೊಟ್ಟಿರುವ ಸಾಧ್ಯತೆಗಳಿರಲಿಲ್ಲ.

ಹೋದ ಕೂಡಲೆ ಕಣ್ಣುಗಳು ಎಮಿಲಿಗಾಗಿ ತಡಕಾಡತೊಡಗಿದವು. ಅವನ ಜೇಬಿನಲ್ಲಿ ಬರೆದು